ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.
ಸಿಸಿ ನಂಬರ್.1242/2023

| | | |
|---|---|---|
| ಸಾಕ್ಷಿಯ ಹೆಸರು | : ರುದ್ರಪ್ಪ | ಸಿ.ಡಬ್ಲ್ಯು 1 |
| ತಂದೆಯ ಹೆಸರು | : ಸಿದ್ದಪ್ಪ | ಪಿ.ಡಬ್ಲ್ಯು 1 |
| ವಯಸ್ಸು | : 70 ವರ್ಷ | |
| ಉದ್ಯೋಗ | : ನಿವೃತ್ತ ಸರ್ಕಾರಿ ನೌಕರ | |
| ವಾಸ ಸ್ಥಳ | : ತರೀಕೆರೆ | |

ದಿನಾಂಕಃ21.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು:

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನಾನು ಊರಲ್ಲಿ ಇಲ್ಲದೇ ಇದ್ದಾಗ ನಮ್ಮ ಜಮೀನಿನ ಮಣ್ಣು ಸಾಗಣೆ ಆಗಿತ್ತು. ನಮ್ಮ ತೋಟದ ಉಸ್ತುವಾರಿ ನನಗೆ ಕರೆ ಮಾಡಿ ವಿಷಯವನ್ನು ತಿಳಿಸಿದರು. ವಿಷಯ ತಿಳಿದು 2 ದಿನಗಳ ಒಳಗಾಗಿ ನಾನು ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿದೆನು ಮತ್ತು ತಹಶೀಲ್ದಾರರಿಗೆ ಅರ್ಜಿ ಕೂಡ ಕೊಟ್ಟೆನು. ಅವರು ಅಳೆ ಮಾಡಿ ಮಣ್ಣು ತೆಗೆದ ಜಮೀನು ನನ್ನ ಹೆಂಡತಿಯ ಹೆಸರಿಗೆ ಇರುವ ಪ್ರದೇಶ ಎಂದು ರಿಪೋರ್ಟ್ ನೀಡಿದರು. ಜಿ.ಸಿ.ಬಿ ಯ ನಂ. ಅನ್ನು ನಮ್ಮ ತೋಟದ ಉಸ್ತುವಾರಿ ಮೂಲಕ ಪಡೆದುಕೊಂಡು ಪೋಲೀಸರಿಗೆ ನೀಡಿದ್ದೇನೆ. ಮಂಜು ತನ್ನ ಸಂಗಡಿಗರೊಂದಿಗೆ ಮಣ್ಣನ್ನು ಸಾಗಾಟ ಮಾಡಿದ್ದಾನೆ ಎಂದು ನನಗೆ ನಂತರದಲ್ಲಿ ತಿಳಿದು ಬಂತು. ನಾಯಾಲಯದ ಮುಂದೆ ಇರುವ ಆರೋಪಿ ಮಂಜು ಇರುತ್ತಾನೆ. ಆತನ ಬಗ್ಗೆ ಹೆಚ್ಚಿನ ಪರಿಚಯ ನನಗೆ ಇರುವುದಿಲ್ಲ. ಜೆ.ಸಿ.ಬಿ ನಂಬರ್ ಈಗ ನೆನಪಿಲ್ಲ. ಈ ಬಗ್ಗೆ ನಾನು ಪೋಲೀಸರಿಗೆ ದೂರು ಕೊಟ್ಟಿದ್ದೇನೆ. ದೂರು ಕೊಟ್ಟ ದಿನವೇ ಪೋಲೀಸರು ಬಂದು ಪಂಚನಾಮೆ ಮಾಡಿದ್ದಾರೆ. ದೂರನ್ನು ನಿಪಿ-1 ಎಂದು, ಪಂಚನಾಮೆಯನ್ನು ನಿಪಿ-2 ಎಂದು, ಸಹಿಗಳನ್ನು ನಿಪಿ-1(ಎ) ಮತ್ತು ನಿಪಿ-2(ಎ) ಎಂದು ಗುರುತಿಸಿಕೊಳ್ಳುತ್ತೇನೆ. ಭಾವಚಿತ್ರವನ್ನು ನಿಪಿ-3 ಎಂದು ಗುರುತಿಸಲಾಯಿತು.
(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-

ಆರೋಪಿಯು ಜೆ.ಸಿ.ಬಿ. ನಂ.ಕೆ.ಎ.12 ಜಡ್.6652 ರಿಂದ ಮಣ್ಣನ್ನು ಅಗೆದಿದ್ದಾರೆ ಎಂದರೆ ಜೆ.ಸಿ.ಬಿ ನಂಬರ್ ನನಗೆ ಸರಿಯಾಗಿ ನೆನಪಿಲ್ಲ. ದಿನಾಂಕ 05.12.2022 ರಂದು ನಮ್ಮ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ಮಣ್ಣು ಅಗೆಯಲಾಗಿದೆ ಎಂದರೆ ಸರಿ. ದಿನಾಂಕ 26.12.2022 ರಂದು

ಸ್ಥಳ ಮಹಜರ್ ಮಾಡಲು ಬಂದಿದ್ದರು ಎಂದರೆ ಸರಿ. ಆ ಸಮಯದಲ್ಲಿ ರಾಜೇಶ ಮತ್ತು ಮಂಜುನಾಥ ಎಂಬುವವರು ಇದ್ದರು ಎಂದರೆ ಸರಿ, ನಾನು ತೋರಿಸಿದ ಸ್ಥಳದಲ್ಲಿ ಪೋಲೀಸರು ಪಂಚನಾಮೆ ಮಾಡಿದ್ದಾರೆ ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

ದೂರನ್ನು ಆಂಗ್ಲ ಭಾಷೆಯಲ್ಲಿ ಟೈಪ್ ಮಾಡಿಸಿದ್ದೇನೆ. ಟೈಂಪಿಗ್ ಸೆಂಟರ್ ಹೆಸರು ನೆನಪಿಲ್ಲ. ನಾನು ದೂರನ್ನು ಟೈಪ್ ಮಾಡಿಸಿಲ್ಲ ಎಂದರೆ ಸರಿಯಲ್ಲ. ಯಾರೋ ಟೈಪ್ ಮಾಡಿಸಿ ಇಟ್ಟಿದ್ದ ದೂರಿಗೆ ನಾನು ಕೇವಲ ಸಹಿ ಮಾತ್ರ ಹಾಕಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಉಸ್ತುವಾರಿಯ ಹೆಸರು ರಾಜಪ್ಪ. ರಾಜಪ್ಪನಿಗೆ ಪೋಲೀಸರಿಗೆ ದೂರು ಕೊಡಲು ತೊಂದರೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಪ್ರಕಾರ ಘಟನೆ 5.12.2022 ಕ್ಕೆ ಆಗಿದೆ ಎಂದರೆ ಸರಿ ದೂರನ್ನು ದಿನಾಂಕ 23.12.2022 ಕ್ಕೆ ಕೊಟ್ಟಿದ್ದೇನೆ ಎಂದರೆ ಸರಿ. ಸುಮಾರು 18 ದಿನಗಳು ತಡವಾಗಿ ದೂರು ಕೊಟ್ಟಿದ್ದೇನೆ ಎಂದರೆ ಸಾಕ್ಷಿಯು ಆರೋಗ್ಯ ಸರಿಯಿರಲಿಲ್ಲ ಎನ್ನುತ್ತಾರೆ. ಸರ್ವೆ ನಂ.51 ರಿಂದ 53 ರಲ್ಲಿ ಕೆಲವು ಸ್ವಲ್ಪ ಭಾಗವನ್ನು ಸರ್ಕಾರದವರು ಭೂ ಸ್ವಾಧೀನವನ್ನು ಪಡಿಸಿಕೊಂಡಿದ್ದಾರೆ ಎಂದರೆ ಸರಿ. ಸರ್ಕಾರ ಸ್ವಾಧೀನ ಪಡಿಸಿಕೊಂಡ ಜಮೀನಿನಲ್ಲಿ ರಸ್ತೆ ಮಾಡಲು ಸಾಕಷ್ಟು ಮಣ್ಣನ್ನು ಅಗೆಯಲಾಗಿದೆ ಎಂದರೆ ಇರಬಹುದು, ನುಮ್ಮ ಜಮೀನಿನಲ್ಲಿ ಅಗೆದಿಲ್ಲ. ನಮ್ಮ ಜಮೀನಿಗೆ ಆರೋಪಿ ಯಜಾವುದೇ ಜೆ.ಸಿ.ಬಿ ಇಂದಿಲ್ಲ, ಯಾವುದೇ ಮಣ್ಣನ್ನು ಅಕ್ರಮವಾಗಿ ಸಾಗಾಟ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವ ಜೆ.ಸಿ.ಬಿ ಗೂ ಆರೋಪಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಸ್ಥಳ ತನಿಖೆ ಅಥವಾ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಬೇರೆಯವರು ಕೊಟ್ಟ ಮಾಹಿತಿಯ ಮೇರೆಗೆ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ.

<u>ಮರುವಿಚಾರಣೆ :</u> ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.